Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 16 | ಬುಧವಾರ 18—9—46 | ಬಿಡಿ ಪ್ರತಿ 3 ಪೈ

ಭಾರತ ಸರ್ಕಾರಕ್ಕೆ ಮೈಸೂರು ಪ್ರಭುತ್ವ ಪ್ರತಿಭಟನೆ

ಅಕ್ಕಿ ಸಂಗ್ರಹಕ್ಕೆ ಡಚ್ಚರ ತಡೆ

ಇಂಡೋನೇಷಿಯಾದ ಭತ್ತದ ಬಯಲುಗಳ ಮೇಲೆ ಡಚ್ಚರು ಧಾಳಿಯಿಟ್ಟು ಹಾಳ್ಮಗೆಡಿಸುತ್ತಿರುವರು. ಭಾರತಕ್ಕೆ ಕಳಿಸುವ ಬಗ್ಗೆ ಅಕ್ಕಿ ಸಂಗ್ರಹಿಸುವ ಮತ್ತು ಪ್ರಾಸ್ತಾನು ಮಾಡುವ ನೃಪ ಹಾರಗಳನ್ನು ಅಸ್ಮವ್ಯಸ್ತಗೊಳಿಸುವುದ ಕ್ಕಾಗಿಯೇ ಡಚ್ಚರು ಈ ಕಾರ್ಯಕ್ರಮ ಕೈಗೊಂಡಿರುವುದಾಗಿ 'ಪ್ರಜಾರಾಜ್ಯ' ಪ್ರಮುಖರ ದೂರು. ಭಾರತದಲ್ಲಿ ಉಪವಾಸದಿಂದ ಬಳಲುವ ಜನತೆಗೆ ಹೊಸೆ ಹೊತ್ತಿರುವ ಪುನರಂಕೆಯನ್ನು ಬ್ರಿಟಿಷ್ ಅಧಿಕಾರಿಗಳು ಗ್ರಹಿಸತಕ್ಕದ್ದೆಂದು ಜಿತ್ತಾಯಿಸಲಾಗಿದೆ.

ಜೋಡಿ ದಂಪತಿಗಳು

ಸೊಹ್ರಾಬ್ ಮೋದಿಯು ಪತ್ನಿ ಸಮೇತ ಅಮೇರಿಕಾಕ್ಕೆ ಹೋಗಿ ಅಲ್ಲಿ ತನ್ನ ಚಿತ್ರಗಳ ಪ್ರದರ್ಶನದ ಏರ್ಪಾಡನ್ನು ಕೈಗೊಳ್ಳಲಿರುವನಂತೆ.

ಬೆಯೊಂಗರ ಶಕ್ತಿ

ಚೀನಾದ ಜನರಲಿಸ್ಮೊ ಚಿಯಾಂಗರಿಗೆ ಚೀನಾ ಸರಕಾರದಲ್ಲಿ 8 ಪ್ರಮುಖ ಹುದ್ದೆಗಳಿರುವುದು, ಜೊತೆಗೆ ಇತರ ಅನೇಕ ಗೌರವ ಪದವಿಗಳನ್ನೂ ಹೊಂದಿರುವರಂತೆ.

ಶ್ರೀವತ್ಸರ ಪುತ್ರಿ

ಭಾರತದ ಸಂಸ್ಕಾರದ ಮಾಜಿ ಅಹಾರ ಸದಸ್ಯರಾದ ಶ್ರೀ ಜೆ. ಪಿ. ಶ್ರೀವತ್ಸರವರ ದ್ವಿತೀಯ ಪುತ್ರಿ ಸಾವಿತ್ರಿಯು ಚಲನಚಿತ್ರಕ್ಕೆ ಸೇರಿ 'ಸಹಾರ' ಕೆ ಚಹಾರ್' ಚಿತ್ರದಲ್ಲಿ ಟರ್ಮ ಭಿಕ್ಷು ಕ ಕನ್ಯೆಯ ಪಾತ್ರವಹಿಸುವಳಂತೆ

ರೂ ೨೦ ಸಾವಿರ ಸಂಬಳ

ಶಾಂತಾ ಆಪ್ಟೆಯನ್ನು ಒಂದು ಚಿತ್ರದಲ್ಲಿ ಪಾತ್ರವಹಿಸಲು ಒಬ್ಬ ಚಲನಚಿತ್ರ ನಿರ್ಮಾಪಕನು ಕೇಳಿದನೆಂದೂ, ಆಕೆಯು ತಿಂಗಳಿಗೆ ರೂ. 20 ಸಾವಿರ ಸಂಬಳ ಕೇಳಿರುವಳೆಂದೂ ಹೇಳಲಾಗಿದೆ

ರಾಜಾಜಿಗೆ ಆಪಾಯ ಆಗಿಲ್ಲ

ನವದೆಹಲಿ ಸೆ 17 — ಶ್ರೀ ಸಿ. ರಾಜ ಗೋಪಾಲಚಾರಿಯವರು ಗೃಹಾಭಿಮುಖವಾಗಿ ಹಿಂದಿರುಗುತ್ತಿದ್ದರು. ಕರ್ನಲ್ ರಸ್ತೆಯ ಬಳಿ ಅವರು ತಿರುಗುವಾಗ ಅವರ ಮೋಟಾರ್ ವಾಹನದ ಹಿಂಬದಿಯಿಂದ ಗುಂಡು ಬಿದ್ದಿತು ಯಾರಿಗೂ ಅಪಾಯವಾಗಿಲ್ಲ ಪೋಲಿಸರು ತನಿಖೆ ಕ್ರಮ ನಡೆಸುತ್ತಿದ್ದಾರೆ.

ಕಾರ್ಮಿಕ ಮಂತ್ರಿಗಳ ಸಮ್ಮೇಳನ

ಮದ್ರಾಸ್ ಸೆ 16 — ಪಂ|| ನೆಹರೂರವರ ಸೂಚನೆಯಂತೆ ಅಕ್ಟೋಬರ್ ತಾ|| 19 ರಲ್ಲಿ ಎಲ್ಲಾ ಪ್ರಾಂತ್ಯಗಳ ಕಾರ್ಮಿಕ ಸಚಿವ ಸಮ್ಮೇಳನ ದೆಹಲಿಯಲ್ಲಿ ಸೇರಲಿದೆ ಮದ್ರಾಸ್ ಕಾರ್ಮಿಕ ಸಚಿವ ಶ್ರೀಗಿರಿ ಸಮ್ಮೇಳನ ಕರೆದಿರುವರು.

ಪಾಕೀಸ್ತಾನ ಬೇಡಿಕೆ ಸ್ವಲ್ಪ ತಗ್ಗಿತು

ನವದೆಹಲಿ ಸೆ 17 — 'ಹಿಂದೂಸ್ತಾನದ ಹಿಂದೂ ಮತ್ತು ಮುಸ್ಲಿಂರು ಐಕ್ಯತೆಯಿಂದಿರಬೇಕು, ಪಾಕೀಸ್ತಾನ ಲಭಿಸಲಿ ಅಥವಾ ಇಲ್ಲದಿರಲಿ ಅದು ನಮ್ಮ ಮುಂದಿರುವ ಪ್ರಶ್ನೆಯಲ್ಲ ಭಾರತದ ಹಿಂದೂ ಮತ್ತು ಮುಸ್ಲಿಂರು ಐಕ್ಯಮತ್ಯವನ್ನು ಪಡೆದಿರಬೇಕು' ಎಂಬುದಾಗಿ ಬಂಗಾಳ ಪ್ರಧಾನಿ ಸುಹ್ರವರ್ದಿ ತಿಳಿಸಿದ್ದಾರೆ.

ತಾತ್ಕಾಲಿಕ ಸರ್ಕಾರಕ್ಕೆ ಖಂಡನೆ

ನವದೆಹಲಿ, ಸೆ 16 — ತಾತ್ಕಾಲಿಕ ಸರ್ಕಾರದ ಕಾಂಗ್ರೆಸ್ ಮಂತ್ರಿಗಳು ಬ್ರಿಟಿಷ್ ರಾಜರಿಗೂ ಮತ್ತು ಅವರ ಅಧಿಕಾರಿಗಳಿಗೂ ರಾಜಭಕ್ತಿ ಸೂಚಕವಾದ ಪ್ರಮಾಣವನ್ನು ಸ್ವೀಕರಿಸಿರುವರು. ಕ್ವಿಟ್ ಇಂಡಿಯಾ ಮತ್ತು ಪೂರ್ಣ ಸ್ವರಾಜ್ಯ ನಿರ್ಣಯಗಳಿಗೆ ಕಾಂಗ್ರೆಸ್ ಮಹಾ ಕಳಂಕವನ್ನು ತಂದಿದೆ — ಎಂಬುದಾಗಿ ಅಖಿಲ ಭಾರತ ಮುನ್ನೆಡೆಯ ಪಕ್ಷದ ಸಮಿತಿ ನಿರ್ಣಯವನ್ನಂಗೀಕರಿಸಿರುವುದು.

ಮುಷ್ಕರ ನಿಂತಿತು

ನವದೆಹಲಿ, ಸೆ 16 — ಇಂಪೀರಿಯಲ್ ಬ್ಯಾಂಕಿನ ಮುಷ್ಕರ ಕೆಲವು ದಿವಸಗಳಿಂದ ನಡೆಯುತ್ತಿದ್ದು ಈಗ ನಿಂತಿದೆ ಕಲ್ಕತ್ತಾ, ಅಲಹಾಬಾದ್, ದೆಹಲಿ ವಿಭಾಗದ ಮುಂತಾದೆಡೆ ನೌಕರರು ಕೆಲಸಕ್ಕೆ ವಾಪಸು ಹೋದರು.

ಮಾನನಷ್ಟ ಮೊಕದ್ದಮೆ

ಮೈಸೂರು, ಸೆ 17 — ಮೈಸೂರು ಪತ್ರಿಕಾ ಸಂಪಾದಕರಾದ ಶ್ರೀ ತಿರುಮಕೂಡ್ಲು ನರಸಿಂಹಾಯಣರ ಮೇಲೆ ಪೌರ ಸಭೆಯ ಕಾಂಗ್ರೆಸ್ ಸದಸ್ಯ ಶ್ರೀ ನಂಜಪ್ಪನವರು ಹೂಡಿರುವ ಮಾನನಷ್ಟ ಮೊಕದ್ದಮೆಯನ್ನು ಮುಂದಿನ ಮಾಹೆ ತಾರೀಖು ಪಾಟೀ ಸವಾಲಿಗೆ ಮುಂದುವರೆಸಲಾಗಿದೆ.

ಹಂಗಾಮಿ ದಿವಾನರು

ಮೈಸೂರು, ಸೆ 18 — ಸರ್ ರಾಮಸ್ವಾಮಿ ಮೊದಲಿಯಾರರ ಗೈರುಹಾಜರಿ ಅವಧಿಯಲ್ಲಿ ಡಾ || ರಾಯರವರು ದಿವಾನರಾಗಿರುವರು.

ಪೌರಸಭೆ

ಮೈಸೂರು, ಸೆ 18 — ಇದೇ ತಾರೀಖು 23 ರಲ್ಲಿ ಮೈಸೂರು ಪೌರಸಭೆ ಸಾಧಾರಣ ಸಭೆ ಸೇರುವುದು.

ಜಿನ್ನಾ-ವೈಸರಾಯ್ ಭೇಟಿ ೭೫ ನಿಮಿಷಕಾಲ ನಡೆಯಿತು

ನವದೆಹಲಿ ಸೆ. 17 — ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನಾರು ವೈಸರಾಯರನ್ನು ಭೇಟಿ ಮಾಡಿ 75 ನಿಮಿಷಕಾಲ ಮಾತುಕತೆ ನಡೆಸಿದರು. ಮತ್ತೆ ವೈಸರಾಯರನ್ನು ಕಾಣುವುದಾಗಿ ತಿಳಿಸಿರುವರು.

Latest News

ಪ್ರಧಾನಿ ನೆಹರೂಗೆ ಅಭಿನಂದನೆ

ಮೈಸೂರು ಸೆ 18 — ಈ ದಿವಸ 4 ಗಂಟೆಗೆ ಸೇರಿದ ಮೈಸೂರು ಪೌರಸಭಾ ವಿಶೇಷಾಧಿವೇಶನದಲ್ಲಿ ತಾತ್ಕಾಲಿಕ ಸರ್ಕಾರ ಸ್ಥಾಪಿಸಿದ್ದಕ್ಕಾಗಿ ಪಂ|| ನೆಹರುರವರನ್ನು ಅಭಿನಂದಿಸುವ ನಿರ್ಣಯವಾಯಿತು.

ಗೋರಕಪುರ ಜಿಲ್ಲೆಯಲ್ಲಿ 20000 ಜನ ನಿರಾಶ್ರಿತರಾಗಿದ್ದಾರೆ.

ಭಾರತ ಸರ್ಕಾರಕ್ಕೆ ಪ್ರತಿಭಟನೆ

ಬೆಂಗಳೂರು ಸೆ 17 — ಮೈಸೂರಿಗೆ ಬರಬೇಕಾಗಿದ್ದ 7000 ಟನ್ ಅಕ್ಕಿಯನ್ನು ಮದರಾಸು ಮತ್ತು ತಿರುವಾಂಕೂರಿಗೆ ಕೊಡಲಿರುವುದನ್ನು ಮೈಸೂರು ಸರಕಾರವು ಭಾರತ ಸರಕಾರಕ್ಕೆ ಪ್ರತಿಭಟಿಸಿದೆ.

ನಾಜಿ ಯುದ್ಧ ಪಾತಕಿಗಳ ಅಂತ್ಯ

ಬರ್ಲಿನ್ ಸೆ 17 — ನಾಜಿ ಯುದ್ಧ ಪಾತಕಿಗಳನ್ನು ಶೂಲಕ್ಕೆ ಏರಿಸುವುದು ಒಟ್ಟಿಗಂಗವಾಗಿ ನಡೆಯ ಕೂಡದೆಂದು ಮಿತ್ರ ಜತೋಟಿ ಕೈಗ್ಗಲ್ಲಿನವರು ತೀರ್ಮಾನಿಸಿರುವರು. ಶೂಲಕ್ಕೇರಿಸುವ ವರೆಗೆ ಆ ವಾರ್ತೆ ಹೊರಪಡುವುದಿಲ್ಲ.

ಇಂಡೋನೇಷಿಯಾ ಅಕ್ಕಿ

ಮದರಾಸು ಸೆ 17 — ಇಂಡೋನೇಷಿಯಾದಿಂದ 8000 ಟನ್ ಭತ್ತ ತರುತ್ತಿರುವ ಹಡಗು ಈ ವಾರ ಕೂಚ್ಚಿ ಬಂದರಿಗೆ ತಲಪುವುದೆಂದು ಹೇಳಲಾಗಿದೆ.

ಬಕೆಟ್ ಷಾಪ್ ಮೇಲೆ ಧಾಳಿ

ಮದರಾಸು ಸೆ. 15 — ಕುದುರೆ ಜೂಜಿನ ಸಂಬಂಧದಲ್ಲಿ ನಡೆಸಲ್ಪಡುತ್ತಿರುವ ಬಕೆಟ್ ಷಾಪುಗಳ ಮೇಲೆ ಧಾಳಿ ನಡೆಸಿ 13 ಸಾವಿರ ರೂ. ಮತ್ತು ಈ ಸಂಬಂಧದ ರಸೀತಿ ಮುಂತಾದ್ದನ್ನು ಟ್ರಿಪ್ಲಿಕೇನಿನ ಒಂದು ಕಡೆ ಪೋಲಿಸರು ಪತ್ತೆಮಾಡಿ ಅನೇಕರನ್ನು ದಸ್ತಗಿರಿ ಮಾಡಿದ್ದಾರೆ.

ಹತೋಟಿ ತೆಗೆಯಲಾಗಿದೆ

ನವದೆಹಲಿ ಸೆ 17 — 100 ವಿವಿಧ ಪದಾರ್ಥಗಳನ್ನು ಹೊರದೇಶದಿಂದ ಅಮದು ಮಾಡುವ ಬಗ್ಗೆ ಇದ್ದ ಹತೋಟ ತೆಗೆದು ಹಾಕಲಾಗಿದೆ.

ಕಲ್ಕತ್ತೆಯಲ್ಲಿ ಭಾರಿ ಮಳೆ ಪ್ರವಾಹವುಂಟಾಗಿ 600 ಮಂದಿ ನಿರಾಶ್ರಿತರಾಗಿದ್ದಾರೆ.

ಭಾರತ ಸ್ವಾತಂತ್ರ್ಯ ಮಹೋತ್ಸವ ನೆರವೇರಿಸಲು ಕಾಲವಿನ್ನೂ ಬಂದಿಲ್ಲವೆಂದು ಗಾಂಧೀಜೀ 'ಹರಿಜನ'ದಲ್ಲಿ ಬರೆದಿದ್ದಾರೆ.

ಮಿ|| ರಾಜಾ ಅಲಿ ಬದಲು ಬೊಂಬಾಯಿ ನ್ಯಾಯಾಧೀಶ ಮಿ|| ಚಾಗಲ್ ಎಂಬ ಮುಸ್ಲಿಂರು ಸರಕಾರಕ್ಕೆ ಜೆನಾಂಗ ಸಭೆಗೆ ಹೋಗುವರು.

ಮೂರು ಲಕ್ಷ ಟ್ಯ ಗೋಧಿ ಭಾರತಕ್ಕೆ

ಬ್ಯೂನೇಸ್‌ಏರ ಸೆ 17 — ಭಾರತಕ್ಕೆ ಮೂರು ಲಕ್ಷ ಟ್ಯ ಗೋಧಿ ಬರುವುದು. ಒಂದೂವರೆ ಲಕ್ಷ ಟ್ಯ ಆಗಲೇ ಆರ್ಜೆಂಟೈನಾ ಬಿಟ್ಟಿದೆ. ಭಾರತ ಆಹಾರ ನಿಯೋಗ ಮಂಡಲಿ ನಾಯಕ ದಿವಾನ ಚರ್ಮಲಾಲ ಒಪ್ಪಂದಕ್ಕೆ ಸಹಿಯಾಗಿದೆ ಎಂದು ತಿಳಿಸಿರುವರು.

At Ranjit

3rd Houseful Week

Anmol Ghadi

ನೂರ್‌ಜಹಾನ್ — ಸುರೇಂದ್ರ

ಜಹರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

ಹಿಂದೂಸ್ತಾನವನ್ನು ಸ್ವತಂತ್ರ ಗೊಳಿಸಲು ನೇತಾಜಿ ಬರುವರು

ನವದೆಹಲಿ ಸೆ 16 — ಹಿಂದೂಸ್ತಾನದ ಅಂತ್ಯ ಕ್ರಾಂತಿಯ ಕಾಲದಲ್ಲಿ ಹಿಂದೂಸ್ತಾನವನ್ನು ಪರದೇಶಿ ಆಡಳಿತದಿಂದ ಬಿಡಿಸಲು ನೇತಾಜಿ ಸುಭಾಷರು ಹಿಂದೂಸ್ತಾನಕ್ಕೆ ಆಗಮಿಸುವರು ಆವರು ಮೃತಿ ಹೊಂದಿಲ್ಲ - ಎಂಬ ನಿರ್ಣಯವನ್ನು ಅಖಿಲ ಭಾರತ ಮುನ್ನಡೆಯು ಪಕ್ಷದ ಸಮಿತಿ ಅಂಗೀಕರಿಸಿದೆ.

ಕೇಂದ್ರ ಸಭೆ

ನವದೆಹಲಿ ಸೆ 17 — ಅಕ್ಟೋಬರ್ ತಾ|| 28 ರಲ್ಲಿ ಕೇಂದ್ರ ಸಭೆಯ ಅಧಿವೇಶನ 3-4 ವಾರಗಳು ನಡೆಯುವ ಸಂಭವವಿದೆ.

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

At Opera == 2 nd Week

M Y S O N

* ಬೇಬಿ ಕಮಲ * ಯು. ಆರ್. ಜೀವರತ್ನಂ ನಟಿಸಿರುವ

ನನ್ನ ಮಗ

ಶಕ್ತಿ ಸುಧಾ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ಸಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿ ಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

ಗಣಪತಿ ಮಂಗಳಾರತಿ — ಇದೇ ತಾ || 21 ನೇ ಶನಿವಾರ ಸಾಹುಕಾರ್ ಹೊಂಬಾಳೆ ರಂಗಯ್ಯನವರ ಕಂಚಿಟಗರ ವಿದ್ಯಾರ್ಥಿ ನಿಲಯದಲ್ಲಿ ಜಿಲ್ಲಾಧಿಕಾರಿ ಶ್ರೀ ರಣಜೋಧ ಸಿಂಗರ ಅಧ್ಯಕ್ಷತೆಯ ಶ್ರೀ ಗಣಪತಿ ಮಹೋತ್ಸವಂಗಳಾರತಿ ಸ್ಥೂರಿ ರಸ್ತೆಯ ಚಿತ್ತರಂಜನ ಮಹಲಿನಲ್ಲಿ ನಡೆಯುತ್ತೆ.

ನಗರದ ನೀರು ಸರಬರಾಯಿಯಲ್ಲಿ ಅಡಚಣೆ

ಮೈಸೂರು ವಾಣಿವಿಲಾಸ ನೀರು ಸರಬರಾಯಿ ಇಲಾಖೆಯ್ಯುಯುಂತ್ರೋಪಕರಣಗಳಲ್ಲಿ ಅಕಸ್ಮಾತ್ ಒದಗಿರುವ ಅನಿರೀಕ್ಷಿತವಾದ ಕೆಲವು ತೊಂದರೆಗಳಿಂದ ನಗರದ ಎಲ್ಲಾ ಭಾಗಗಳಲ್ಲಿಯೂ ನೀರಿನ ಸರಬರಾಜಿಗೆ ಅಡಚಣೆಯುಂಟಾಗಿರುತ್ತದೆ.

ನೀರು ಬರುವ ಕಾಲ ಮತ್ತು ನಿಲ್ಲುವ ಕಾಲವನ್ನು ಖಚಿತವಾಗಿ ನುಂಚೆಯೇ ತಿಳಿಸುವುದು ಸಾಧ್ಯವಿಲ್ಲವಾಗಿರುತ್ತದೆ. ಈ ಕಾರಣದಿಂದ ಪುರಜನರು ಈ ಲಾಗಾಯ್ತು ಒಂದು ವಾರದವರೆಗೆ ನೀರು ಬಂದಾಗ ದಾಸ್ತಾನು ಮಾಡಿಕೊಳ್ಳಬೇಕಾಗಿ ವಿನಂತಿ.

ಸಾಧ್ಯವಾದಮಟ್ಟಿಗೂ ನೀರನ್ನು ಸ್ವಲ್ಪ ಕಾಲವಾದರೂ ನಗರದ ಎಲ್ಲಾ ಭಾಗಗಳಿಗೂ ಒದಗಿಸಲು ಪ್ರಯತ್ನಿಸಲಾಗುವುದು.

(ಸಹಿ) ಎ. ಕೃಷ್ಣಮೂರ್ತಿರಾವ್

ಮೈಸೂರು, 17-9-46 ವೈಸ್‌ಪ್ರೆಸಿಡೆಂಟ್

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಆಫೀಸಿನಿಂದಾ

ನೋಟಿಫಿಕೇಷನ್

1946 ನೇ ಸೆಪ್ಟಂಬರ್ 30 ನೇ ತಾರೀಖು ಸೋಮವಾರ ಮಧ್ಯಾಹ್ನ 4 ಗಂಟೆವರೆವಿಗೆ ಈ ಕೆಳಗೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿರತಕ್ಕ ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ.

1. ಮೈಸೂರು ತಾಲ್ಲೂಕು ಬಾರ್‌ಲೈನ ರಸ್ತೆಯ ಎರಡನೇ ಮೈಲಿಯಲ್ಲಿ ಒಂದು ಟನಲ್ ಕಟ್ಟುವುದು.

2. ಪಿರಿಯಾಪಟ್ಟಣದ ತಾಲ್ಲೂಕು ಹಲಗನ ಹಳ್ಳಿ ಸಂತೆ ಮೈದಾನದಲ್ಲಿ ಒಂದು ಭಾವಿಯನ್ನು ತೋಡುವುದು.

ಟೆಂಡರನ್ನು ಸೀಲು ಮಾಡಿದ ಕವರಿನಲ್ಲಿಟ್ಟು ಮೇಲುಗಡೆಯಲ್ಲಿ ಮೇಲೆ ನಮೂದು ಮಾಡಿರುವ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರಿಗೆ ಎಂದು ಅಡ್ರೆಸ್ಸು ಬರೆದು ಕಳುಹಿಸತಕ್ಕದ್ದು.

ಠೇವಣಿಗಾಗಿ ಪ್ರತಿಯೊಂದು ಕೆಲಸಕ್ಕೂ 50 ರೂಪಾಯಿಗಳನ್ನು ಖಜಾನೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಚಲನ್ನನ್ನು ಟೆಂಡರ ಜೊತೆಯಲ್ಲಿ ಹಾಜರು ಮಾಡಬೇಕು.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ದಿನಗಳಲ್ಲಿ ಮಧ್ಯಾಹ್ನ 12 ರಿಂದ ಸಾಯಂಕಾಲ 5 ಗಂಟೆಯವರೆವಿಗೆ ಇಷ್ಟವುಳ್ಳ ಕಂಟ್ರಾಕ್ಟರುಗಳು ತಿಳಿಯಬಹುದು.

ಯಾವ ಟೆಂಡರನ್ನು ಅಖೈರಾಗಿ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಅಧಿಕಾರಕ್ಕೆ ಒಳಪಟ್ಟಿರುತ್ತೆ. ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರುಗಳಿಗೆ ಕಾರಣವನ್ನು ಸಹ ಸೂಚಿಸಲಾಗುವುದಿಲ್ಲ.

ಕೆ. ಸಿ. ಸುಬ್ಬಣ್ಣ

ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್ ಮೈಸೂರು.